ಅಕ್ಟೋಬರ್ 23, 2006

ಪ್ರೀತಿಯ ಶ್ರೀ ಪ್ರಧಾನ ಮಂತ್ರಿಗಳೇ

ರಾಷ್ಟ್ರೀಯ ಜ್ಞಾನ ಆಯೋಗ ಶಾಲೆಯ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಅವಕಾಶಗಳು, ಗುಣ, ಇನ್ನಿತರೆ ವಿಷಯಗಳನ್ನು ಒಳಗೊಂಡಂತೆ ಹಲವಾರು ವಿಚಾರಗಳನ್ನು ಪರೀಕ್ಷಿಸುತ್ತಿದೆ. ಉತ್ತಮ ಶಾಲೆಯ ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶಗಳನ್ನು ಒದಗಿಸಲು ಅಭಿವೃದ್ಧಿ ಒಂದು ಅಡಿಪಾಯವಾಗುತ್ತದೆ ಮತ್ತು ಇದು ಭಾರತವನ್ನು ಅರಿವಿನ ಸಮಾಜವನ್ನಾಗಿ ಯಾವುದೇ ಬೆಳವಣಿಗೆಯನ್ನು ಮಾಡಬೇಕಾದರೆ ಒಂದು ಕನಿಷ್ಠ ಷರತ್ತಿನ ಅಗತ್ಯವಾಗಿರುತ್ತದೆ. ನಾವು ಬೃಹತ್ ಪ್ರಮಾಣದ ಸಮಾಲೋಚನೆಗಳ ಪ್ರಕ್ರಿಯೆಯಲ್ಲಿದ್ದೇವೆ. ಇತ್ತೀಚೆಗೆ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ವಿಚಾರಗಳನ್ನು ಕುರಿತು ವಿಸ್ತಾರವಾದ ಸಲಹೆಗಳನ್ನು ಕೊಡುತ್ತೇವೆ.

ಏನೇ ಆಗಲಿ, ಈ ಘಟ್ಟದಲ್ಲಿ ಕೇಂದ್ರ ಸರ್ಕಾರದ ಇತ್ತೀಚಿನ ಹೆಜ್ಜೆಯ ವಿಚಾರವಾಗಿ ಪ್ರತಿಕ್ರಿಯಿಸಲು ನಾವು ಇಚ್ಛಿಸುವೆವು. ಶಿಕ್ಷಣ ಮಸೂದೆಗೆ ಮಾದರಿ ಹಕ್ಕನ್ನು ರಾಜ್ಯ ಶಿಕ್ಷಣ ವಿಭಾಗದ ಕಾರ್ಯದರ್ಶಿಗಳಿಗೆ ಕಳುಹಿಸಬೇಕು ಮತ್ತು ಇದರ ಜೊತೆಗೆ ಈ ಮಸೂದೆಯನ್ನು ಕಾರ್ಯರೂಪಕ್ಕೆ ತರಲು ಉತ್ತೇಜನ ಸವಲತ್ತುಗಳನ್ನು ರಾಜ್ಯಸರ್ಕಾರಗಳಿಗೆ ಕೊಡಬೇಕು ಎಂಬುದಾಗಿ ಕೇಂದ್ರಸರ್ಕಾರ ಇಚ್ಛೆಪಟ್ಟಿದೆ. ನಾವು ಈ ಮಸೂದೆಯನ್ನು ಅನುಸರಿಸಿದ್ದೇವೆ ಮತ್ತು ತುಂಬಾ ಪರಿಣಿತರ ಮತ್ತು ಶಿಕ್ಷಣ ತಜ್ಞರ ಜೊತೆಗೆ ಸಮಾಲೋಚಿಸಿದ್ದೇವೆ. ಈ ಮಾದರಿ ಮಸೂದೆ ಅನೇಕ ಕಾರಣಗಳಿಂದ ದೋಷಪೂರಕವಾಗಿದೆ ಎಂಬುದಾಗಿ ನಮಗೆ ಅನಿಸಿದೆ ಮತ್ತು ಪ್ರಮುಖವಾಗಿ ಇಂತಹ ಶಾಸನ ವಿಧಿ 21 ಎ ನ ಸಂವಿಧಾನಿಕ ಬದ್ಧತೆಯನ್ನು ಅನುಸರಿಸುವ ಮೂಲಕ ಕೇಂದ್ರ ಸರ್ಕಾರವೇ ಒತ್ತಾಯಪಡಿಸಬೇಕು. ಈಗ ಶಾಲೆಯ ಶಿಕ್ಷಣ ರಾಜ್ಯ ಸರ್ಕಾರಗಳ ಒಂದು ಪ್ರಮುಖ ಜವಾಬ್ದಾರಿಯಾಗಿರುವುದರಿಂದ ಸಂಯುಕ್ತ ವ್ಯವಸ್ಥೆಯ ಬಗ್ಗೆ ರಾಜ್ಯ ಸರ್ಕಾರಗಳಿಗೆ ಕಾಳಜಿಗಳು ಇರಬಹುದು ಎಂಬುದಾಗಿ ನಾವು ಗುರುತಿಸಿರುವೆವು.

ಅದೇನೇ ಇದ್ದರೂ, ಒಂದು ಸೂಕ್ತ ಕೇಂದ್ರ ಶಾಸನದ ಮೂಲಕ ಈ ವಿಚಾರವನ್ನು ಬಗೆಹರಿಸಬಹುದಾಗಿದೆ ಎಂಬುದಾಗಿ ನಮಗೆ ಅನಿಸಿದೆ ಮತ್ತು ಈ ಶಾಸನ ಕೆಳಗಿನ ಸಲಹೆಗಳನ್ನು ಪರಿಗಣಿಸುವುದು.

1. ಕೇಂದ್ರ ಶಾಸನ: ರಾಷ್ಟ್ರಮಟ್ಟದಲ್ಲಿ ಶಿಕ್ಷಣದ ಹಕ್ಕನ್ನು ದೃಢಪಡಿಸಲು ಒಂದು ಶಾಸನದ ಅಗತ್ಯವಿದೆ ಮತ್ತು ಇದನ್ನು ಮೂಲಭೂತ ಹಕ್ಕು ಎಂಬುದಾದ ವಿಧಿ 21ಎ ಯಿಂದ ನಿರ್ದೇಶಿಸಲ್ಪಟ್ಟಿದೆ. ಇದು ಯಾವ ರಾಜ್ಯದೊಳಗಿನ ನಾಗರೀಕ ಎಂಬುದರ ಮೇಲೆ ಅವಲಂಬಿತವಾಗಿರುವುದರಿಂದ ರಾಜ್ಯ ಸರ್ಕಾರಗಳು

ಮಾದರಿ ಮಸೂದೆಯನ್ನು ಪ್ರತ್ಯೇಕವಾಗಿ ವಿಧಿಸಬೇಕು ಎಂಬುದು ಭಾರತ ಸರ್ಕಾರ ಸಂವಿಧಾನದ ಜವಾಬ್ದಾರಿಯನ್ನು ನೆರವೇರಿಸಲು ಸಾಕಷ್ಟಿಲ್ಲ. ಆದುದರಿಂದ ಪಂಚಾಯತ್ ರಾಜ್ ಸಾಲಿನ ಕಾಯಿದೆಯ ಪ್ರಕಾರ ಒಂದು ಕೇಂದ್ರ ಶಾಸನವನ್ನು ವಿಧಿಸಬೇಕು ಮತ್ತು ಇದು ಒಂದು ನಿಶ್ಚಿತ ಕಾಲದೊಳಗೆ ರಾಜ್ಯಗಳು ಶಿಕ್ಷಣ ಮಸೂದೆಗಳ ಹಕ್ಕನ್ನು ವಿಧಿಸುವ ಅಗತ್ಯವಿದೆ ಮತ್ತು ಇದರ ಜೊತೆಗೆ ಕೇಂದ್ರ ಸರ್ಕಾರದ ವಶದಲ್ಲಿರುವ ಪ್ರಾಥಮಿಕ ಹಣಕಾಸಿನ ಜವಾಬ್ದಾರಿಯನ್ನು ಕೂಡ ವಿಧಿಸುವ ಅಗತ್ಯವಿದೆ.

2. ಹಣಕಾಸಿನ ಬದ್ಧತೆ: ಕೇಂದ್ರ ಸರ್ಕಾರ ಶಿಕ್ಷಣದ ಹಕ್ಕನ್ನು ದೃಢಪಡಿಸಲು ಬೃಹತ್ ಪ್ರಮಾಣದಲ್ಲಿ ಹೆಚ್ಚುವರಿ ಹಣವನ್ನು ಒದಗಿಸಲೇಬೇಕು ಆದುದರಿಂದ ಕೇಂದ್ರ ಶಾಸನದಲ್ಲಿ ಹಣಕಾಸಿನ ನಿಬಂಧನೆ ಇರಲೇಬೇಕು. ಈ ನಿಬಂಧನೆಯಲ್ಲಿ ಕೇಂದ್ರ ಸರ್ಕಾರ ಪ್ರಾರಂಭಿಕ್ ಶಿಕ್ಷಾ ಕೋಶ್‌ನ ಕಂದಾಯವನ್ನು ರಾಜ್ಯ ಸರ್ಕಾರಗಳ ಜೊತೆಗೆ ಹಂಚಿಕೊಳ್ಳುವ ಮತ್ತು ಮಕ್ಕಳ ಶಿಕ್ಷಣದ ಹಕ್ಕಿನ ದೃಢಪಡಿಸಲು ಬೇಕಾಗಿರುವಂತಹ ಹೆಚ್ಚುವರಿ ಸಂಪನ್ಮೂಲಗಳನ್ನು ಒದಗಿಸಲು ಅಗತ್ಯತೆ ತಿಳಿದಿರಬೇಕು/ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿಯನ್ನು ಸಾಧಿಸಲು ಬೇಕಾದಂತಹ ಹೆಚ್ಚುವರಿ ಸಂಪನ್ಮೂಲಗಳ ಅಂದಾಜು ಶೇಕಡಾ 0.8 ರಿಂದ 2.5 ಜಿಡಿಪಿ ಶೇಕಡಾವಾರುಗಳು ವ್ಯತ್ಯಾಸವಾಗುವುದು ಮತ್ತು ಈ ವ್ಯತ್ಯಾಸ ಬಳಲ್ಪಡುವ ಮಾನದಂಡದ ಮೇಲೆ ಅವಲಂಬಿತವಾಗಿರುತ್ತದೆ. ಏನೇ ಆದರೂ, ಬೇಕಾಗಿರುವ ಹಣಕಾಸಿನ ಸಂಪನ್ಮೂಲಗಳು ಈ ಅಂದಾಜುಗಳ ಕೆಳಮಟ್ಟದಲ್ಲೇ ಇರುವ ಸಾಧ್ಯತೆಗಳಿರುತ್ತವೆ. ಕೆಲವು ರಾಜ್ಯಗಳಲ್ಲಿ ಸಾರ್ವತ್ರಿಕ ನಿಬಂಧನೆ ಈಗಾಗಲೇ ತುಂಬಾ ಹತ್ತಿರವಿರುವುದರಿಂದ ಮತ್ತು ಬೇರೆ ರಾಜ್ಯಗಳಲ್ಲಿ ಸರ್ವ ಶಿಕ್ಷ ಅಭಿಯಾನ್‌ನ ಮೂಲಕ ಹೆಚ್ಚಿನ ಅವಕಾಶವನ್ನು ಒದಗಿಸುವುದರಲ್ಲಿ ಇತ್ತೀಚೆಗೆ ಒಳ್ಳೆಯ ಬೆಳವಣಿಗೆ ಆಗಿವೆ.

3. ಕಾಲ ನಿಬಂಧನೆ: ರಾಜ್ಯ ಮಟ್ಟದ ಶಾಸನ ಸಾರ್ವತ್ರಿಕ ಶಿಕ್ಷಣವನ್ನು ಸಾಧಾರಣ ಮಟ್ಟದಾದರೂ ಸಾಧಿಸಲ್ಪಡಬೇಕಾದ ಒಂದು ಅವಧಿಯನ್ನು ನಿರ್ದಿಷ್ಟವಾಗಿ ಹೇಳಬೇಕು. ಆರಿಸಲು ತಕ್ಕದಾಗಿ ಮೂರು ವರ್ಷಗಳ ಒಳಗೆ ಮಾದರಿ ಮಸೂದೆ ನಿಬಂಧನೆಗಳನ್ನು ಅಂಗೀಕರಿಸುವುದಕ್ಕೆ ಮತ್ತು ತಕ್ಕಗತಗಳಿಸುವುದಕ್ಕೆ ಯಾವುದೇ ಕಾಲದ ಮಿತಿಯನ್ನು ಒದಗಿಸುವುದಿಲ್ಲ.

4. ರೂಢಿಮಟ್ಟಗಳು ಮತ್ತು ಪ್ರಮಾಣಕಗಳ ವೇಳಾಪಟ್ಟಿ ಶಿಕ್ಷಣದ ಒಂದು ಕನಿಷ್ಠ ಗುಣಮಟ್ಟವನ್ನು ವಾದಪಡಿಸಬೇಕಾದರೆ ಎಲ್ಲಾ ಶಾಲೆಗಳೂ ಅನುಸರಿಸಬೇಕಾದ ರೂಢಿಯ ಮಟ್ಟಗಳ ವೇಳಾಪಟ್ಟಿ ಇರುವುದು ಬಹಳ ಪ್ರಮುಖವಾದುದು. ಮಾದರಿ ಮಸೂದೆಯನ್ನು ಅಂಥ ಯಾವುದೇ ರೂಢಿಯ ಮಟ್ಟಗಳನ್ನು ಹೊಂದಿಲ್ಲ ಮತ್ತು ಶಾಲೆಗಳೂ ಒದಗಿಸಬೇಕಾದ ಕನಿಷ್ಠ ಶಿಕ್ಷಣದ ಉಲ್ಲೇಖವೂ ಕೂಡ ಇಲ್ಲ. ಇಲ್ಲಿ ಬರೆ ಸಮಾನವಾದ ಗುಣಮಟ್ಟ ಎಂಬುದರ ಉಲ್ಲೇಖವಿದೆ. ಆದರೆ ಗುಣಮಟ್ಟದ ಯಾವುದೇ ಪ್ರಾಚರವನ್ನು ಉಲ್ಲೇಖಿಸಿಲ್ಲ. ಗುಣಮಟ್ಟ ಎಂಬುದನ್ನು ದೃಢಪಡಿಸಬೇಕಾದರೆ ಇದು ಒಂದು ಕ್ಲಿಷ್ಟಕರವಾದ ಅಂಶ ಎಂಬುದು ತಿಳಿಯುತ್ತದೆ. ಕೆಲವೊಂದು ಕೂಡಿ ಮಟ್ಟಗಳಿಗೆ ಸಂಬಂಧಿತವಾದ, ಅಡಿಗಲ್ಲುಗಳು, ಪ್ರತಿಯೊಂದು ಶಾಲೆಗಳೂ ಮತ್ತು

ವಿದ್ಯಾರ್ಥಿಗೂ ಉಪಾಧ್ಯಾಯರ ಸಂಖ್ಯೆ, ಭೋಜನಾ ವಿಧಿಗಳು ಮತ್ತು ಬೇರೆ ಸೌಲಭ್ಯಗಳು, ಇತರೆ ಅಗತ್ಯ ನಿಯಮಗಳೆಂದು ಇವಕ್ಕೆ ನಿಷ್ಠವಾಗಿರಬೇಕಾಗುತ್ತದೆ.

5. ಉಪಾಧ್ಯಾಯರುಗಳಿಗೆ ನಿರ್ದಿಷ್ಟ ವಿವರಣೆ: ಶಿಕ್ಷಕರು ಶಿಕ್ಷಣದ ಗುಣಮಟ್ಟವನ್ನು ದೃಢಪಡಿಸುವ ವಿಚಾರದಲ್ಲಿ ನಿರ್ಣಯದ ಪಾತ್ರ ವಹಿಸುವರು. ಸುಸ್ಪಷ್ಟವಾಗಿ ರಚಿತವಾದ ಆದರೆ ಉಪಾಧ್ಯಾಯರುಗಳಿಗೆ ಕನಿಷ್ಠ ಅರ್ಹತೆಗಳಿಗೆ ಹೊಂದಿಕೊಳ್ಳುವ ರೂಢಿಗಳು ಮುಖ್ಯವಾಗಿರುವವು,. ಮಾದರಿ ಮಸೂದೆ ಒಬ್ಬ ಉಪಾಧ್ಯಾಯನಿಗೆ ಅಥವಾ ಆಸ್ಥಾನಕ್ಕೆ ಅಗತ್ಯವಾದ ಅರ್ಹತೆಗಳು ಮತ್ತು ಸೇವೆಯ ಕಾಲದಲ್ಲಿನ ತರಬೇತಿ ಕುರಿತು ಯಾವುದೇ ನಿಖರವಾದ ವಿವರಣೆಗಳನ್ನು ಹೊಂದಿಲ್ಲ. ಒಬ್ಬ ಉಪಾಧ್ಯಾಯನೆಂದರೆ ತರಗತಿಯಲ್ಲಿ ಬೋಧಿಸುವವನು ಎಂಬುದಾಗಷ್ಟೆ ಸ್ಪಷ್ಟೀಕರಿಸಿದೆ. ಏನೇ ಆಗಲಿ, ಇಲ್ಲಿ ಕೂಡ ಒಬ್ಬ ಉಪಾಧ್ಯಾಯನ ಅರ್ಹತೆ ಮತ್ತು ತರಬೇತಿ ಕುರಿತು ರೂಢಿಗಳನ್ನು ನಿಖರವಾಗಿ ಹೇಳುವ ಅಗತ್ಯವಿದೆ.

6. ನ್ಯಾಯಾಧೀನತೆ: ಯಾವುದೇ ಹಕ್ಕು, ಶಿಕ್ಷಣದ ಹಕ್ಕನ್ನು ಒಳಗೊಂಡಂತೆ, ನ್ಯಾಯಯುತವಾಗಿದ್ದರೆ ಮಾತ್ರ ಅದು ಅರ್ಥಪೂರ್ಣವಾಗಿರುತ್ತದೆ. ಏನೇ ಆಗಲಿ ರಾಜ್ಯ ಸರ್ಕಾರಗಳಿಗೆ ಕಳುಹಿಸುವ ಮಸೂದೆಯಲ್ಲಿ ಮಗುವಿನ ಜವಾಬ್ದಾರಿಯನ್ನು ಪೋಷಕರು/ ತಂದೆತಾಯಿಗಳ ಮೇಲೆ ಹಾಕಲಾಗಿದೆ. ಸರ್ಕಾರದ ಜವಾಬ್ದಾರಿಗಳನ್ನು ಬೇರೆ ಬೇರೆ ಹಂತಗಳಲ್ಲಿ ಒಪ್ಪಿಕೊಳ್ಳಲೇಬೇಕು. ಮತ್ತು ಅದನ್ನು ನ್ಯಾಯಾಧಿಕಾರಕ್ಕೊಳಪಟ್ಟ ಹಾಗೆ ಮಾಡಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯ ಕಾಯಿದೆಯನ್ನು ಈ ಸಂದರ್ಭದಲ್ಲಿ ಒಂದು ಉದಾಹರಣೆಯಾಗಿ ಬಳಸಬಹುದು.

7. ಪರಿಹರಿಸುವ ಯಾಂತ್ರಿಕವ್ಯವಸ್ಥೆ: ನ್ಯಾಯಾಧೀನತೆಯನ್ನು ದೃಢಪಡಿಸುವುದಕ್ಕೆ ಒಂದು ಪರಿಹರಿಸುವ ಯಾಂತ್ರಿಕ ವ್ಯವಸ್ಥೆಯ ರೂಪುರೇಖೆಯ ವಿವರಣೆಯನ್ನು ನೀಡಬೇಕು ಮತ್ತು ಯೋಗ್ಯವಾದ ಕಾರ್ಯವಿಧಾನವನ್ನು ವಿದ್ಯಾರ್ಥಿಗಳಿಗೆ ಅಥವಾ ತಂದೆತಾಯಿಗಳಿಗೆ ಹಕ್ಕನ್ನು ಎತ್ತಿಹಿಡಿದಿಲ್ಲದ ವರ್ಷದಲ್ಲಿ ಒಂದು ಯೋಗ್ಯವಾದ ಕಾರ್ಯವಿಭಾಗವನ್ನು ಯೋಗ್ಯವಾದ ಕಾರ್ಯವಿಧಾನವನ್ನು ಸ್ಥಾಪಿಸಬೇಕು.

8. ಸಾರ್ವತ್ರಿಕ ಶಾಲಾ ಶಿಕ್ಷಣ ಕೊಡಿಸುವುದು: ಶಾಲಾ ಶಿಕ್ಷಣವನ್ನು ಎಲ್ಲರಿಗೂ ಒದಗಿಸಬೇಕು. ಅನಾನುಕೂಲದಿಂದ ಇರುವ ಮಕ್ಕಳಿಗೆ, ಭೂಮಿ ಇಲ್ಲದೆ ಇರುವ ಮಕ್ಕಳಿಗೆ ಅಲ್ಪಸಂಖ್ಯಾತ ವರ್ಗದ ಮಕ್ಕಳಿಗೆ ಶಾಲಾ ಶಿಕ್ಷಣ ಅತ್ಯವಶ್ಯವಾಗಿದೆ ಮತ್ತು ಇವರೆಲ್ಲರನ್ನೂ ದೌರ್ಬಲ್ಯವಿರುವ ಅಥವಾ ವಿಶೇಷ ಸವಲತ್ತುಗಳು ಅಗತ್ಯವಿರುವ ಮಕ್ಕಳ ಜೊತೆಗೆ ಸಂಘಟಿಸಬೇಕು. ಈ ಮಕ್ಕಳಿಗೆ ಸರ್ಕಾರದ ಶಾಲಾ ಶಿಕ್ಷಣವನ್ನು ಒದಗಿಸುವ ವ್ಯವಸ್ಥೆಯಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯ ಕಾರಣದಿಂದ ಯಾವುದೇ ತಾರತಮ್ಯ ಎಸಗುವಂತಿಲ್ಲ. ಈ ಮಾದರಿ ಮಸೂದೆಗೆ ಸದೃಢವಾದ ಮತ್ತು ಏಕಪಕ್ಷೀಯವಾದ ಶಾಲಾ ಶಿಕ್ಷಣದ ವ್ಯವಸ್ಥೆಯನ್ನು ಸೃಷ್ಟಿಸಬಹುದಾದ ಶಕ್ತಿಯನ್ನು ಹೊಂದಿದೆ. ಈ ರೀತಿಯಾದ ಶಿಕ್ಷಣ, ಅನಾನುಕೂಲ ವರ್ಗಗಳು ಮತ್ತು ಹಿನ್ನಲೆಗಳಿಂದ ಬಂದಂತಹ ಮಕ್ಕಳ ಶಿಕ್ಷಣ ವ್ಯವಸ್ಥೆಯ ಶ್ರೇಣಿ ಖಣದಲ್ಲಿ ಕೊನೆಗೊಳ್ಳುವುದು. ಕಾರಣ

ಅಂತಹ ಸಂದರ್ಭಗಳಲ್ಲಿ ದೈನಂದಿನ (ಸಾಂಪ್ರದಾಯಿಕ) ಶಾಲಾಶಿಕ್ಷಣ ನಿಬಂಧನೆಯನ್ನು ಆದೇಶಿಸುವುದಕ್ಕಿಂತ ಅನೌಪಚಾರಿಕ ಶಿಕ್ಷಣದ ನಿಬಂಧನೆಯ ಅಗತ್ಯ ಮಾತ್ರ ಅವಕಾಶವಾಗಿರುವುದು.

ಎಲ್ಲಾ ಸಂದರ್ಭಗಳಲ್ಲಿ ಶಾಲೆಯ ವ್ಯವಸ್ಥೆ ನಿಸ್ಸಂಶಯವಾಗಿ ಮಕ್ಕಳಿಗೆ ಬೇಕಾದ ಅಗತ್ಯಗಳನ್ನು ಒದಗಿಸಲು ಸಾಕಷ್ಟು ಅನುಕೂಲಕರವಾಗಿರಬೇಕು.

ಮೇಲೆ ಪ್ರಸ್ತಾಪಿಸಿದ ಅಂಶಗಳನ್ನು ಕುರಿತು ನಮಗೆ ಸಂಪೂರ್ಣ ವಿವರಣೆಗಳನ್ನು ಒದಗಿಸುವುದಕ್ಕೆ ಸಂತೋಷವಾಗುವುದು. ರಾಷ್ಟ್ರೀಯ ಜ್ಞಾನ ಆಯೋಗ ಮಧ್ಯಸ್ಥಿಕರ ಜೊತೆಗೆ ಸಮಾಲೋಚನೆಯನ್ನು ಮುಂದುವರೆಸಿದೆ ಮತ್ತು ಶಾಲೆಯ ಶಿಕ್ಷಣದ ಸಂಬಂಧದಲ್ಲಿ ಬೇರೆ ಬೇರೆ ವಿವಾದಾಂಶಗಳನ್ನು ಪರೀಕ್ಷಿಸುವುದು, ನಾವು ಸಾರ್ವತ್ರಿಕವಾಗಿ ಒಂದು ಉತ್ತಮ ಗುಣಮಟ್ಟವನ್ನು ಹೇಗೆ ದೃಢೀಕರಿಸುವುದು ಎಂಬ ಪ್ರಶ್ನೆಗಳ ಕುರಿತು ಕೇಂದ್ರೀಕರಿಸುತ್ತಿದ್ದೇವೆ. ಸಂಸ್ಥೆಗಳ ರಚನೆಗಳು ಮತ್ತು ಸ್ಥಳೀಯ ಸಮುದಾಯಗಳಿಂದ ಹಿಡಿತದ ಸ್ವರೂಪಗಳು ಮತ್ತು ಅಭಿವೃದ್ಧಿ ಗುಣಮಟ್ಟದ ಶಾಲಾಶಿಕ್ಷಣಕ್ಕೆ ಈ ಸಮುದಾಯಗಳ ಕೊಡುಗೆ, ಸಂಬಂಧಿಸಿದ ವಿವಾದಾಂಶಗಳು, ವಿಶೇಷವಾಗಿ ಗುರುತಿಸಲ್ಪಟ್ಟ ಜಾಗಗಳಲ್ಲಿ ಸಾಕಷ್ಟು ಶಾಲಾ ಶಿಕ್ಷಕರ ಗುಣಮಟ್ಟ ಮತ್ತು ಪರಿಮಾಣವನ್ನು ದೃಢಪಡಿಸುವುದು, ಇತರೆ. ಶಾಲೆಯ ಶಿಕ್ಷಣವನ್ನು ಕುರಿತು ನಾವು ಒಂದು ವಿಸ್ತಾರವಾದ ಶಿಫಾರಸ್ಸುಗಳ ಮಾಲೆಯನ್ನು ಹತ್ತಿರದ ಭವಿಷ್ಯದಲ್ಲಿ ಸಲ್ಲಿಸುವೆವು.

ನಮಸ್ಕಾರ ಮತ್ತು ಪ್ರೀತಿಯ ವೈಯಕ್ತಿಕ ಅಭಿನಂದನೆಗಳು

ಸಾಮ್ ಪಿಟ್ರೋಡಾ

ಅಧ್ಯಕ್ಷ

ರಾಷ್ಟ್ರೀಯ ಜ್ಞಾನ ಆಯೋಗ

ಸಿಸಿ- ಶ್ರೀ ಅರ್ಜುನ್ ಸಿಂಗ್, ಮಂತ್ರಿ, ಎಮ್.ಹೆಚ್.ಆರ್.ಡಿ.

ಶ್ರೀ ಮಾಂಟೆಕ್ ಸಿಂಗ್ ಅಹ್ಲುವಾಲಿಯಾ, ಉಪಾಧ್ಯಕ್ಷ, ಯೋಜನಾ ಆಯೋಗ